# KARNATAK UNIVERSITY, DHARWAD

No. KU-Syndicate/ Proceedings-20/2022-23/A-30 Date: 6 JUN 2022

**"CONFIDENTIAL"**

The Special Syndicate meeting was held on **2nd June, 2022 at 03.30 pm** in the Syndicate Hall, Administrative Building, Karnatak University, Dharwad and the proceedings of the Syndicate meeting are as follows:

**The following members were present**

| | | |
|---|---|---|
| 1. | Prof. K.B. Gudasi, Vice-Chancellor K.U.Dharwad | Chairman |
| 2. | Sri. Krishnamurthy B.R., Joint Director, Collegiate Education, Dharwad | Member |
| 3. | Dr. Mallikarjun Patil, K.U. Dharwad | Member |
| 4. | Smt. Hamsaveni N., Dharwad | Member |
| 5. | Dr. K.D. Haveripeth, Salakinakoppa, Dharwad | Member |
| 6. | Dr.(Smt). Kamala D. Dhawale, Dharwad | Member |
| 7. | Sri. R.B. Godi, Kundagol | Member |
| 8. | Prof. M.K. Shaikh, Bhatakal | Member |
| 9. | Sri Jayaprakash S. Badami, Navalgund | Member |
| 10. | Sri. Prakash Rayakar, Hubballi | Member |
| 11. | Smt. Sneha Joshi, Bangalore | Member |
| 12. | Dr. Shantanagouda C. Jakkanagoudar, Shiggaon | Member |
| 13. | Sri Sudhindra Deshpande, Dharwad | Member |
| 14. | Sri Ravikumar Maliger, Dharwad | Member |
| 15. | Dr. B. Basavanagoud., K.U. Dharwad | Member |
| 16. | Sri. Yashpal Kshirsagar. Registrar (Admn), K.U. Dharwad | Member Secretary |

ನಿಯಮಾನುಸಾರ ಕನಿಷ್ಠ ಅಗತ್ಯ ಸಂಖ್ಯೆ 08ಕ್ಕಿಂತ ಹೆಚ್ಚು ಅಂದರೆ 16 ಜನ ಸದಸ್ಯರುಗಳು ಹಾಜರಿರುವುದನ್ನು ಖಚಿತಪಡಿಸಿಕೊಂಡು ನಿಗದಿತ ಸಮಯಕ್ಕೆ ಸರಿಯಾಗಿ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯದಾಗಿ ಮಾನ್ಯ ಕುಲಪತಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿ, ನೂತನವಾಗಿ ಸಿಂಡಿಕೇಟ ಸದಸ್ಯರಾಗಿ ಆಗಮಿಸಿದ ಶ್ರೀ. ಕೃಷ್ಣಮೂರ್ತಿ. ಬಿ. ಆರ್., ಜಂಟಿ ನಿರ್ದೇಶಕರು, ಹಾಗೂ ಪ್ರೋ. ಎಮ್. ಕೆ. ಶೇಖ, ಪ್ರಾಚಾರ್ಯರು ಇವರನ್ನು ಪರಿಚಯಿಸಿ, ಸ್ವಾಗತಿಸಿದರು. ನಂತರ ಸಭೆಯ ಕಲಾಪವನ್ನು ಈ ಮುಂದಿನಂತೆ ಪ್ರಾರಂಭಿಸಲಾಯಿತು.

ಕುಲಸಚಿವರು ಕುಲಪತಿಗಳು

ಕಲಂ ಸಂಖ್ಯೆ 01:- **ವಿಷಯ:** ಪಿ.ಎಚ್.ಡಿ/ಎಮ್.ಫಿಲ್ ಪದವಿಗಳ ಹಾಗೂ ವಿವಿಧ ಸ್ನಾತಕ/ಸ್ನಾತಕೋತ್ತರ ಪದವಿಗಳು/ಡಿಪ್ಲೋಮಾ ಹಾಗೂ ಸರ್ಟಿಫಿಕೇಟ ಕೋರ್ಸುಗಳ ಪದವಿಗಳನ್ನು ಅನುಮೋದಿಸುವ ಕುರಿತು.

**ಟಿಪ್ಪಣಿ:**

ಕರ್ನಾಟಕ ವಿಶ್ವವಿದ್ಯಾಲಯದ ಸನ್ 2021ನೇ ಸಾಲಿನ 72ನೇ ವಾರ್ಷಿಕ ಘಟಿಕೋತ್ಸವವು ದಿನಾಂಕ: 07.06.2022 ರಂದು ಜರುಗಲಿರುವ ಪ್ರಯುಕ್ತ ದಿನಾಂಕ: 30.05.2022ರಂದು ಹೊರಡಿಸಲಾದ ವಾರ್ಷಿಕ ಘಟಿಕೋತ್ಸವದ ಅಧಿಸೂಚನೆಯನ್ವಯ ಉಪಸ್ಥಿತವಾಗಿ/ ಅನುಪಸ್ಥಿತವಾಗಿ ಅಧಿಕೃತಗೊಳ್ಳಲಿರುವ ಪಿಎಚ್.ಡಿ/ಎಮ್.ಫಿಲ್. ಪದವಿಗಳ ಹಾಗೂ ವಿವಿಧ ಸ್ನಾತಕ/ಸ್ನಾತಕೋತ್ತರ ಪದವಿಗಳು/ಡಿಪ್ಲೋಮಾ ಹಾಗೂ ಸರ್ಟಿಫಿಕೇಟ ಕೋರ್ಸುಗಳ ಪದವಿಗಳನ್ನು ಪದವಿಗಳನ್ನು ದಿನಾಂಕ: 02.06.2022ರಂದು ಜರುಗಿದ **"ವಿದ್ಯಾ ವಿಷಯಕ ಪರಿಷತ್ ಸಭೆಯ"** ಪರಿಶೀಲನೆಗಾಗಿ_ಮಂಡಿಸಲಾಗಿತ್ತು. ಸದರ **"ವಿದ್ಯಾ ವಿಷಯಕ ಪರಿಷತ್ ಸಭೆಯ** ನಿರ್ಣಯ ಸಂಖ್ಯೆ, 01. ರಲ್ಲಿ ಈ ಕೆಳಗಿನಂತೆ ನಿರ್ಣಯವನ್ನು ಕೈಗೊಂಡಿತ್ತು.

> "ದಿನಾಂಕ: 07.06.2022ರಂದು ಜರುಗಲಿರುವ 2022ನೇ ಕರ್ನಾಟಕ ವಿಶ್ವವಿದ್ಯಾಲಯದ 72ನೇ ವಾರ್ಷಿಕ ಘಟಿಕೋತ್ಸವದಲ್ಲಿ ಅಧಿಕೃತಗೊಳ್ಳಲಿರುವ ಪಿಎಚ್.ಡಿ/ಎಮ್.ಫಿಲ್/ಪದವಿಗಳ ಹಾಗೂ ವಿವಿಧ ಸ್ನಾತಕ/ಸ್ನಾತಕೋತ್ತರ ಪದವಿಗಳು/ಡಿಪ್ಲೋಮಾ/ ಹಾಗೂ ಸರ್ಟಿಫಿಕೇಟ್ ಕೋರ್ಸುಗಳ ಪದವಿಗಳನ್ನು ಪರಿಶೀಲಿಸಿ, **ವಿದ್ಯಾ ವಿಷಯಕ್ ಪರಿಷತ್ ಸಭೆಯಲ್ಲಿ** ಅನುಮೋದಿಸಿರುವ ವಿವರ ಈ ಕೆಳಗಿನಂತಿದೆ"

| Sl. No. | Name of the Degree | In person | Absentia | Total |
|---|---|---|---|---|
| 1 | Ph.D | 143 | 00 | 143 |
| 2 | M.Phil | 03 | 01 | 04 |
| 3 | Post-Graduate | 689 | 3254 | 3943 |
| 4 | Under-Graduate | 38 | 17724 | 17762 |
| 5 | Law | 00 | 26 | 26 |
| 6 | Diplomas | 14 | 105 | 119 |
| 7 | Cetificate Course | 00 | 27 | 27 |
| | **Total:** | **887** | **21137** | **22024** |

ವಾಡಿಕೆ ಪ್ರಕಾರ ವಿದ್ಯಾ ವಿಷಯಕ್ ಪರಿಷತ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಆಡಳಿತ ಮಂಡಳಿಯ ಅನುಮೋದನೆಗಾಗಿ ಮಂಡಿಸಲಾಯಿತು.

ಸಭೆಯಲ್ಲಿ ಈ ಕೆಳಕಂಡಂತೆ ಘಟಿಕೋತ್ಸವ ಕುರಿತು ಮಾಹಿತಿಯನ್ನು ನೀಡಲಾಯಿತು.

- ಕರ್ನಾಟಕ ವಿಶ್ವವಿದ್ಯಾಲಯದ 72ನೇ ಘಟಿಕೋತ್ಸವವನ್ನು ದಿನಾಂಕ 07.06.2022ರಂದು ಮಧ್ಯಾಹ್ನ 3.00 ಗಂಟೆಗೆ ಜರುಗಿಸಲು ಘನತೆವೆತ್ತ ರಾಜ್ಯಪಾಲರು ಆದೇಶಿಸಿದಂತೆ ಘಟಿಕೋತ್ಸವಕ್ಕೆ ಸಂಬಂಧಿಸಿದಂತೆ ಎಲ್ಲ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲಾಗುತ್ತಿದೆ.
- ಕರ್ನಾಟಕ ವಿಶ್ವವಿದ್ಯಾಲಯದ 72ನೇ ಘಟಿಕೋತ್ಸವದಲ್ಲಿ 2021 ನೇ ಸಾಲಿನ 887 ಉಪಸ್ಥಿತವಾಗಿ ಹಾಗೂ 21,137 ಅನುಪಸ್ಥಿತವಾಗಿ ಒಟ್ಟು 22,024 ಅಧಿಕೃತಗೊಳ್ಳಲಿರುವ ಪಿ.ಎಚ್.ಡಿ/ಎಮ್.ಫಿಲ್ ಪದವಿಗಳ ಹಾಗೂ ವಿವಿಧ ಸ್ನಾತಕ/ಸ್ನಾತಕೋತ್ತರ ಪದವಿಗಳು/ಡಿಪ್ಲೋಮಾ ಹಾಗೂ ಸರ್ಟಿಫಿಕೇಟ್ ಕೋರ್ಸ್‌ಗಳ ಪದವಿಗಳನ್ನು ಪ್ರಧಾನ ಮಾಡಲಾಗುವುದು.

ಕುಲಸಚಿವರು

ಕುಲಪತಿಗಳು

- ಸದರಿ ಘಟಿಕೋತ್ಸವದಲ್ಲಿ ಅತಿ ಹೆಚ್ಚು ಸುವರ್ಣ ಪದಕಗಳನ್ನು ಪಡೆಯುವ ವಿದ್ಯಾರ್ಥಿಗಳ ಸಂಖ್ಯೆ 103, ಒಟ್ಟು 233 ಸುವರ್ಣ ಪದಕಗಳನ್ನು (ವಿದ್ಯಾರ್ಥಿಗಳು ಪಡೆದ ಸುವರ್ಣ ಪದಕಗಳನುಸಾರವಾಗಿ) ಪ್ರಧಾನ ಮಾಡಲಾಗುವುದು.
- ಸದರಿ ಘಟಿಕೋತ್ಸವದಲ್ಲಿ ಪ್ರಶಸ್ತಿ (ಸುವರ್ಣಪದಕಗಳು/ಪಾರಿತೋಷಕಗಳು/ಶಿಷ್ಯವೇತನಗಳು/ರ್‍ಯಾಂಕಗಳು) ಪಡೆಯುತ್ತಿರುವ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ 288 (ವಿದ್ಯಾರ್ಥಿಗಳು ಪಡೆದ ಪ್ರಮಾಣ ಪತ್ರಗಳನುಸಾರವಾಗಿ) ಒಟ್ಟು 418 ಪ್ರಮಾಣ ಪತ್ರಗಳನ್ನು ವಿತರಿಸಲಾಗುವುದು.
- ಗೌರವ ಡಾಕ್ಟರೇಟ್ ವಿಷಯವಾಗಿ ಘನತೆವೆತ್ತ ರಾಜ್ಯಪಾಲರು ರಚಿಸಿದ ಸಮಿತಿಯ ವರದಿ ಅನ್ವಯ 03 ಹೆಸರನ್ನು ಶಿಫಾರಸ್ಸು ಮಾಡಿರುವುದನ್ನು ಓದಲಾಯಿತು. ಅದರಲ್ಲಿ ಪ್ರೋ. ಎಸ್. ಕೆ. ಸೈದಾಪೂರ, ಧಾರವಾಡ, ಶ್ರೀ ಮ ನಿ ಪ್ರ ಮಲ್ಲಿಕಾರ್ಜುನ ಮಹಾಸ್ವಾಮಿಗಳು, ಪೀಠಾಧ್ಯಕ್ಷರು, ಮುರುಘಾಮಠ, ಧಾರವಾಡ ಹಾಗೂ ಡಾ. ಮನೋಜ ಗೋರ್ಕೆಲಾ ಇವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡುವ ವಿಷಯವನ್ನು ಪ್ರಸ್ತಾಪಿಸಿದಾಗ ಸಿಂಡಿಕೇಟ್ ಸದಸ್ಯರಾದ ಶ್ರೀ ಸುಧೀಂದ್ರ ದೇಶಪಾಂಡೆ ಹಾಗೂ ಶ್ರೀ ರವಿಕುಮಾರ ಮಾಳಿಗೇರ ಇವರು ಪ್ರೋ. ಎಸ್. ಕೆ. ಸೈದಾಪೂರ ಇವರ ಹೆಸರನ್ನು ಶಿಫಾರಸ್ಸು ಮಾಡಿರುವ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಿದರು. ಇನ್ನುಳಿದ ಸಿಂಡಿಕೇಟ್ ಸದಸ್ಯರು ಸಮ್ಮತಿ ಸೂಚಿಸಿದರು.
- ಕೊನೆಯಲ್ಲಿ ಸಿಂಡಿಕೇಟ್ ಸಭೆಯು ಈ ಕೆಳಗಿನಂತೆ ಠರಾಯಿಸಲಾಯಿತು.

<u>ಠರಾವು</u>

"ದಿನಾಂಕ: 07.06.2022ರಂದು ಜರುಗಲಿರುವ 2022ನೇ ಕರ್ನಾಟಕ ವಿಶ್ವವಿದ್ಯಾಲಯದ 72ನೇ ವಾರ್ಷಿಕ ಘಟಿಕೋತ್ಸವದಲ್ಲಿ ಅಧಿಕೃತಗೊಳ್ಳಲಿರುವ ಪಿಎಚ್.ಡಿ/ಎಮ್.ಫಿಲ್/ಪದವಿಗಳ ಹಾಗೂ ವಿವಿಧ ಸ್ನಾತಕ/ಸ್ನಾತಕೋತ್ತರ ಪದವಿಗಳು/ಡಿಪ್ಲೋಮಾ/ ಹಾಗೂ ಸರ್ಟಿಫಿಕೇಟ್ ಕೋರ್ಸುಗಳ ಪದವಿಗಳ ಕುರಿತು, **ವಿದ್ಯಾ ವಿಷಯಕ್ ಪರಿಷತ್ ಸಭೆಯಲ್ಲಿ** ಕೈಗೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯು ಅನುಮೋದಿಸಿತು"

**ಕುಲಸಚಿವರು** **ಕುಲಪತಿಗಳು**